# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ

<u>ಸಿ.ಸಿ ನಂ. **220/2018**</u>

**ಪ್ರಾಸಾ-01**

**ಚಾಸಾ- 03**

| | |
|---|---|
| ಸಾಕ್ಷಿಯ ಹೆಸರು | ಃ ಬಾಲಕೃಷ್ಣ ಎಸ್ ಕೆ. ತಃ ಎಸ್ ಕುಪ್ಪಸ್ವಾಮಿ |
| ವಯಸ್ಸು | ಃ 54 ವರ್ಷ |
| ಉದ್ಯೋಗ | ಃ ಅಬಕಾರಿ ಮುಖ್ಯಪೇದೆ, ಯಲ್ಲಾಪುರ ವಲಯ ಕಚೇರಿ |
| ವಾಸ | ಃ ಶಿರಸಿ, |

**ದಿನಾಂಕಃ** 19-06-2025 **ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

**<u>ಮುಖ್ಯ ವಿಚಾರಣೆ. ಎ. ಪಿ. ಪಿ. ವಕೀಲರಿಂದ</u>**

ನಾನು 2014 ರಿಂದ 2018 ರವರೆಗೆ ಆನಮೋಡ ತನಿಖಾ ಠಾಣೆಯಲ್ಲಿ ಅಬಕಾರಿ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 12-04-2018 ರಂದು ರಾತ್ರಿ ಪಾಳೇಯದಲ್ಲಿ ಇದ್ದಾಗ ಆನಮೋಡ ತನಿಖಾಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ , ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಗೋವಾ ಕಡೆಯಿಂದ ಒಂದು ದ್ವಿಚಕ್ರ ವಾಹನ ಸಂಃ ಕೆಎ-22-ಎಎಕ್ಸ್ - 3058 ವಾಹನ ಅತಿವೇಗ ಬಂದಿತ್ತು. ಸದ್ರಿ ವಾಹನವನ್ನು ತಡೆದು ನಿಲ್ಲಿಸಿ, ವಿಚಾರಣೆ ಮಾಡಿದಾಗ, ವಾಹನದ ಚಾಲಕ ಸರಿಯಾದ ಉತ್ತರವನ್ನು ಕೊಡಲಿಲ್ಲ. ಆಗ ವಾಹನವನ್ನು ಚಾಲಕನನ್ನು ಕರೆದುಕೊಂಡು ಠಾಣೆಗೆ ತೆರಳಿ, ವಾಹನದಲ್ಲಿದ್ದ ಒಂದು ಕೇಸರಿ ಬ್ಯಾಗನ್ನು ಪರಿಶೀಲನೆ ಮಾಡುತ್ತಿರುವಾಗ, ಆರೋಪಿ ಹಿಂದೆ ಇರುವ ಬಾಗಿಲಿನಿಂದ ಓಡಿ ಹೋದ. ನಂತರ ಬ್ಯಾಗನ್ ನ್ನು ತೆಗೆದು ನೋಡಿದಾಗ, ಅದರಲ್ಲಿ

1. 180 ಎಂ.ಎಲ್ ನ ರಾಯಲ್ ಸ್ಟ್ಯಾಗ್ಸ ವಿಕ್ಕಿಯ 8 ಬಾಟಲಿಗಳು

2. 750 ಎಂ.ಎಲ್ ನ ರಾಯಲ್ ಸ್ಟ್ಯಾಗ್ಸ ವಿಕ್ಕಿಯ 2 ಬಾಟಲಿಗಳು

3. 750 ಎಂ.ಎಲ್ ನ ರಿಯಲ್ ವಿಕ್ಸಿಯ 8 ಬಾಟಲಿಗಳು

4. 500 ಎಂ.ಎಲ್ ನ ಬಿಯರ್ ನ 24 ಟಿನಗಳು ಇದ್ದವು.

3. ಸದ್ರಿ ವಾಹನದ ಪೇಟ್ರೋಲ ಟ್ಯಾಂಕನ ಮೇಲೆ ಇರುವ ಪ್ಯಾಕೇಟ ಚೆಕ ಮಾಡಿದಾಗ, ಅದರಲ್ಲಿ ಸದರಿ ವಾಹನದ ದಾಖಲೆಗಳು ಇದ್ದವು. ಅವುಗಳನ್ನು ಪರಿಶೀಲನೆ ಮಾಡಿದಾಗ , ಓಡಿ ಹೋದ ವ್ಯಕ್ತಿಯ ಹೆಸರು ಜ್ಞಾನೇವೇಶ್ವರ ತಂದೆ ಬಲಿರಾಮ ಗುರವ ಎಂದು ಗೊತ್ತಾಯಿತು. ಅದೇ ರೀತಿ ಸದರಿ ವಾಹನದ ಮಾಲೀಕರು ಹೆಸರು ತುಕರಾಮ ಗುರವ, ಸಾಃ ರಾಮಗುರವಾಡಿ, ಖಾನಾಪುರ ಎಂದು ಗೊತ್ತಾಯಿತು.

4. ನಂತರ ನಾನು ಮತ್ತು ಚಾಸಾ. 1, 2 ರವರ ಸಮಕ್ಷಮ ಎಲ್ಲಾ ಮದ್ಯವನ್ನು ಜಪ್ತು ಮಾಡಿ, ಅವುಗಳಲ್ಲಿ ತಲಾ ಎರಡರಂತೆ 8 ಬಾಟಲಿಗಳು / ಟಿನ್ಗಳನ್ನು ರಾಸಾಯನಿಕ ಪರೀಕ್ಷೆಗೆಂದು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ ದಾರ ಕಟ್ಟಿ ಸೀಲ ಮಾಡಲಾಯಿತು. ಮತ್ತು ಅವುಗಳ ಮೇಲೆ ಮಾದರಿ ಚೀಟಿಯನ್ನು ಹಚ್ಚಿ ನಮ್ಮ ಸಹಿಯನ್ನು ಪಡೆಯಲಾಯಿತು.

5. ಸದರಿ ಪಂಚನಾಮೆಯನ್ನು ಅದೇ ದಿನ ಬೆಳಿಗ್ಗೆ 5.45 ರಿಂದ 7.00 ಗಂಟೆಯವರೆಗೆ ತಯಾರಿಸಲಾಯಿತು

6. ನಂತರ ಅಕ್ರಮ ಮದ್ಯವನ್ನು, ಪಂಚನಾಮೆಯನ್ನು ಪಡೆದುಕೊಂಡು ಚಾಸಾ 1 ರವರು ಮುಂದಿನ ಕ್ರಮಕ್ಕೆಗೊಂಡಿರುತ್ತಾರೆ.

7. ಸಾಕ್ಷಿಯು ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ **ನಿಪಿ-1** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1 (ಎ)** ಎಂದು ಗುರುತಿಸಲಾಯಿತು.

8. ಸಾಕ್ಷಿದಾರರು 8 ಬಾಟಲಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ 1 ರಿಂದ 8 ಎಂದು ಗುರುತಿಸಲಾಯಿತು.

9. ಈ ದಿನ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ. ವಿ.ಎಸ್.ಜೆ ವಕೀಲರಿಂದ.**

1. ಆ ದಿನ ಆರೋಪಿಯನ್ನು ನಾವೆಲ್ಲಾರೂ ಸೇರಿ ನಿಲ್ಲಿಸಿರುತ್ತೇವೆ. ಆನಮೋಡ ತನಿಖಾ ಠಾಣೆಯ ಹತ್ತಿರ ಸಾಕಷ್ಟು ಅಂಗಡಿಗಳು ಇವೆ ಎಂದರೆ ಸರಿ. ಅಲ್ಲಿ ಸದರಿ ಸ್ಥಳೀಕರನ್ನು ಪಂಚನಾಮೆಗೆ ಸಹಕರಿಸಲು ಹೋಗಿ ಕೇಳಿದ್ದರು ಸಹಿತ ಅವರು ಒಪ್ಪಿಕೊಂಡಿರುವುದಿಲ್ಲ. ಈ ರೀತಿ ನಿಪಿ 1 ರಲ್ಲಿ ನಮೂದಿಸಿಲ್ಲ. ಕೇಸರಿ ಬಣ್ಣದ ಬ್ಯಾಗನ್ನು ಜಪ್ತು ಮಾಡಿಲ್ಲ. ಸದರಿ ಬ್ಯಾಗನ ವಿವರಗಳನ್ನು ನಿಪಿ 1 ರಲ್ಲಿ ನಮೂದಿಸಿಲ್ಲ.

2. ಆನಮೋಡ ತನಿಖಾ ಠಾಣೆಯ ಹಿಂದೆ ಗುಡ್ಡ ಇದೆ ಎಂದರೆ ಸರಿಯಲ್ಲ. ಆರೋಪಿ ಓಡಿ ಹೋಗುವಾಗ ನಾನು ಮತ್ತು ಚಾಸಾ 3 ರವರು ಹಿಡಿಯಲು ಪ್ರಯತ್ನಿಸಿದ್ದೇವು. ಬ್ಯಾಗನ್ನು ಕಚೇರಿಯಲ್ಲಿ ಪರಿಶೀಲನೆ ಮಾಡಿರುತ್ತೇವೆ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**Sd/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**